ಊರುಗಳಿಗೆ
ನಿಮ್ಮ ಮುಂದೆ ಅನ್ನದ ದಾರಿ ರೆಕ್ಕೆಯೊಡೆದಿದೆ
ಚೇರ ಹಕ್ಕಿ ರೆಕ್ಕೆ ಬಡಿದು ದಾರಿ ತೋರುತ್ತಿದೆ
ಹೋಗಿ ಬನ್ನಿ ಕಾಂಚೀಪುರದ ಅತಿಥಿಗಳೇ
ಹಸಿವು ಎಂದು ಯಾರನ್ನೂ ದ್ವೇಷಿಸಬೇಡಿ
ಅನ್ನ ಸಿಕ್ಕಿದಾಗ ಹಸಿದವರ ಕಣ್ಣುಗಳನ್ನು ಮರೆಯ ಬೇಡಿ.

ಗುಂಪಿನಲ್ಲಿದ್ದ ಒಂದು ಹೆಣ್ಣು ಮುಂದೆ ಬಂದು: 'ಅಯ್ಯಾ, ನಿಮ್ಮ ಹಾಡಿನ ಪದಗಳು ನನಗೆ ತಿಳಿಯದು, ಆದರೆ ಈ ಹಾಡಿನ ಅರ್ಥ ಏನೆಂದು ಗೊತ್ತಾಯಿತು! ಹೋಗಿ ಬರುತ್ತೇವೆ ಅಯ್ಯಾ. ನಿಮ್ಮ ಹರಕೆ ಇರಲಿ ನಮಗಾಗಿ, ಎಳೆಗೂಸುಗಳಿಗಾಗಿ' ಎಂದಳು.

ಬಂದಿದ್ದ ಅತಿಥಿಗಳೆಲ್ಲಾ ಶಾತ್ತನಾರ್‌ಗೆ ವಂದಿಸಿ, ಮನೆಯ ಮುಂದಿನ ಮಬ್ಬುಗತ್ತಲಿನಿಂದ ಹೊರಬಂದು ಹುಣ್ಣಿಮೆಯ ಬೆಳಕಿನಲ್ಲಿ ಪುಹಾರ್‌ನ ದಾರಿಹಿಡಿದರು. ಆ ಗುಂಪಿನಲ್ಲಿ ಕಟ್ಟಕಡೆಯವಳಾಗಿ ಹೋಗುತ್ತಿದ್ದ ಆ ಹೆಣ್ಣು ಒಮ್ಮೆ ಶಾತ್ತನಾರ್ ಅವರೆಡೆಗೆ ತಿರುಗಿ ನೋಡಿತು. ಕೆಡುಕೇ ಇಲ್ಲದ ಅವಳ ಕಣ್ಣುಗಳಲ್ಲಿದ್ದ ಧನ್ಯತೆಯ ಬೆಳಕು ಶಾತ್ತನಾರ್‌ಗೆ ಮಸುಕಾಗಿ ಕಂಡಿತು. ಕತ್ತಲ ಲ್ಲೂ ಹೊಳೆಯುವ ನಕ್ಷತ್ರಗಳಂತೆ! ಅವಳ ಕಂಕುಳಲ್ಲಿದ್ದ 3-4 ವರುಷದ ಹೆಣ್ಣುಮಗಳು, ಅವಳು ತೊಟ್ಟಿದ್ದು ಅಲ್ಲಲ್ಲಿ ಹರಿದ ಒಂದು ತುಂಡು ಲಂಗ ಮಾತ್ರ! ಚಳಿಯಿಂದ ಅವಳ ಮೈ ಕರೆಗಟ್ಟಿತ್ತು. ಶಾತ್ತನಾರ್‌ಗೆ ಆ ಹೆಣ್ಣುಮಗುವಿನ ಕಣ್ಣಿನ ನೋಟ ಬಹುದಿನಗಳವರೆಗೆ ಮರೆಯಲಾಗಲಿಲ್ಲ. ಕತ್ತಲು ಮತ್ತು ಹಸಿವು ಅಪರಿಚಿತರನ್ನೂ ಪರಿಚಿತರನ್ನಾಗಿ ಮಾಡಿಬಿಡುತ್ತದೆ!

ಕಾಂಚೀಪುರದಿಂದ ಬಂದಿದ್ದವರೆಲ್ಲ ಬೆಳುದಿಂಗಳ ಬೆಳಕಿನಲ್ಲಿ ಕರಗಿಹೋದರು. ಕೊನೆಯೇ ಇಲ್ಲವೆಂಬಂತೆ ಅವರು ನಡೆಯುತ್ತಿದ್ದ ಹಾದಿ ಅವರೊಡನೆ ಸಾಗುತ್ತಿತ್ತು. ಶಾತ್ತನಾರ್ ಅವರ ಕಣ್ಣುಗಳು ಸೋಲುವತನಕ ಅವರನ್ನೇ ನೋಡುತ್ತಿದ್ದವು.

ಮಧುರೆಯ ಹೊರಗೆ ವೈಗೈ ನದಿ ತಣ್ಣಗೆ ಹರಿಯುತಿತ್ತು.

* * *

ಕಾಂಚೀಪುರದ ಮೇಲೆ ಬರದ ನೆರಳು:

ಬೀಸುತ್ತಿದ್ದ ಬಿಸಿಗಾಳಿ ಮತ್ತು ಒಣಗಿದ್ದ ಬಂಜರು ಭೂಮಿಯ ಮೇಲೆ ರಕ್ಕಸರ ಮೆರವಣಿಗೆ ಸಾಗಿತ್ತು. ಕಲ್ಲು ಬಂಡೆಗಳೆಲ್ಲ ಬಿಸಿಲಿನ ಝಳಕ್ಕೆ ಕರಗುತ್ತಿದ್ದವು. ತೇವವೆಂಬುದೇ ಅಲ್ಲಿ ಕಾಣೆಯಾಗಿತ್ತು. ಬಂಗಾರ ಬಣ್ಣದ ಧೂಳು ಎಲ್ಲದರ ಮೇಲೂ ಕವಿದಿತ್ತು. ಬರದ ಅನಂತತೆಯ ಮುಂದೆ ಕಾಂಚೀಪುರ ಹಾಳುಸುರಿಯುತ್ತಿತ್ತು. ಎತ್ತ ನೋಡಿದರೂ ಸತ್ತುಬಿದ್ದ ದನಗಳು, ನೀರಿಲ್ಲದ ಬಾವಿಗಳು, ಹೊಗೆಯಾಡದ ಮನೆಗಳು. ಹಸುರಿಲ್ಲದ ಹೊಲಗಳು. ಹೀಗೇ ಮುಂದುವರಿದರೆ, ಮರುಭೂಮಿ ಎನಿಸಿಕೊಳ್ಳಲು ಈ ನಗರಕ್ಕೆ ಹೆಚ್ಚು ದಿನ ಬೇಕಿರಲಿಲ್ಲ! ಇಡೀ ನಗರ ಬಣಗುಡುತ್ತಿತ್ತು. ಆಗಲೇ ಅದೆಷ್ಟು ಜನರು ಬರದಲ್ಲಿ ಏಗಲಾಗದೆ ಕಾಂಚೀಪುರದಿಂದ ವಲಸೆ ಹೋಗಿದ್ದಾರೋ? ಪ್ರಕೃತಿ ಇಷ್ಟು ಕಠೋರವಾಗಿ ಮುನಿದಿದ್ದನ್ನು ಕಾಂಚೀಪುರ ಯಾವಾಗಲೂ ನೋಡಿರಲೇ ಇಲ್ಲ! ಮೃತ್ಯುವೂ ಕೂಡ ಕೊನೆಗಾಣಿಸಲಾರದ ಸಂಕಟವಿದು!

ಎಲ್ಲಿಂದ ಬಂದವರೋ ಇವರು ಗೊತ್ತಿಲ್ಲ? ಸತ್ತ ದನಗಳ ಕೊಂಬಿನ ಮೇಲೆ ಕುಳಿತು ಬಂದಿದ್ದರು. ತಮ್ಮನ್ನು ತಾವು ಬರದ ಜೊತೆಯಲ್ಲೇ ಬರುವ ರಕ್ಕಸನ ಮಕ್ಕಳು ಎಂದು ಹೇಳಿಕೊಳ್ಳುತ್ತಿದ್ದರು. ಒಂದೊಂದು ಕೊಂಬಿನ ತುದಿಯಲ್ಲೂ ನೂರಾರು ಜನ. ಕೋರೆಹಲ್ಲುಗಳು, ರಕ್ತವನ್ನೇ ಕಾರುವಂತಿದ್ದ ಕಣ್ಣುಗಳು, ರಕ್ತದ ರುಚಿ ಕಂಡ ಮಾರುದ್ದ ನಾಲಗೆ, ಕೈಯಲ್ಲಿ ಅಲುಗು ಹಿಡಿದಿದ್ದರು. ಮನುಷ್ಯರು ಮತ್ತು ದನಕರುಗಳ ತಲೆಬುರುಡೆಗಳನ್ನು ಮಾಲೆಯಾಗಿ ಧರಿಸಿದ್ದ ಅವರು, ಅಬ್ಬರ ಕೇಕೆಗಳಿಂದ ಕುಣಿಯುತ್ತಿದ್ದರು. ಯಾರಿಗೂ ಮುಖವೆಂಬುದೇ ಇರಲಿಲ್ಲ! ಕರೆಯದೇ ಬಂದಿದ್ದ ಸಾವಿನ ಮನೆಯ ದೂತರು. ಸತ್ತವರನ್ನೂ, ಬದುಕಿದವರನ್ನೂ ಹುಡುಕಿ, ಹುಡುಕಿ ತಿನ್ನುತ್ತಿರುವ ಇವರನ್ನು ತಡೆಯುವವರು ಯಾರು!

ಇನ್ನು ನೋಡಲಾಗದೆ ಕಾಂಚೀನಗರವೇ ಕೇಳಿತು 'ನೀವೆಲ್ಲಾ ಎಲ್ಲಿಂದ ಬಂದವರು?'

'ನಾವೆಲ್ಲೂ ದೂರದಿಂದ ಇಲ್ಲಿಗೆ ಬಂದವರಲ್ಲ! ಇಲ್ಲಿಯೇ ತಲೆಮರೆಸಿಕೊಂಡು ಇದ್ದವರು. ಬರದ ನೆರಳು ಕಾಣಿಸಿಕೊಂಡ ಮೇಲೆ ನಾವು ಹೊರಗೆ ಬಂದಿದ್ದೇವೆ. ನಮ್ಮನ್ನು ಸೃಷ್ಟಿಸಿದ್ದು ನಿಮ್ಮವರೆ! ಈಗ ತಾವೇ ಬಿತ್ತಿದ ಬೀಜದ ಫಲವನ್ನು ಉಣ್ಣುತ್ತಿದ್ದಾರೆ. ಈ